**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 1868 / 2024**

ಚಾಸಾ :- 06 ಪ್ರಾಸಾ :- 05

| | |
|---|---|
| ಹೆಸರು | **ಡಾಃ ಹೇಮಶ್ರೀ** |
| ಗಂಡನ ಹೆಸರು | **ಡಾಃ ಅಭಿಜೀತ್** |
| ವಯಸ್ಸು | **35 ವರ್ಷ** |
| ಉದ್ಯೋಗ | **ವೈದ್ಯಾಧಿಕಾರಿಗಳು, ಮಾಗಡಿ ಸರ್ಕಾರಿ ಆಸ್ಪತ್ರೆ** |
| ವಿಳಾಸ | **ಮಾಗಡಿ** |

**ದಿನಾಂಕಃ 06-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ದಿನಾಂಕಃ 01-12-2021 ರಿಂದ ಇಲ್ಲಿಯವರೆವಿಗೂ ರಂದು ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 29-01-2024 ರಂದು ಸುಮಾರು ರಾತ್ರಿ 11.40 ರ ಸಮಯದಲ್ಲಿ ರಾಜಮ್ಮ ಕೋಂ ಲೇಟ್ ರಂಗಯ್ಯ, 71 ವರ್ಷ, ವಾಸಃ ದಂಡಿಗೆಪುರ ಗ್ರಾಮ ರವರು ತಿಲಕ್ ಎಂಬುವರು ದೊಣ್ಣೆಯಿಂದ ದಿನಾಂಕಃ 29-01-2024 ರಂದು ಸಂಜೆ 6.30 ಕ್ಕೆ ಹಲ್ಲೆ ಮಾಡಿರುತ್ತಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರರಿಗೆ

1. Contusion measuring 5 X 4 C.M. over left arm.
2. Contusion with swelling measuring 6 X 6 C.M. over dorsum of left foram.
3. 3 X 3 C.M. contusion over right arm.
4. 4 X 4 C.M. contusion over right Hypochondrium.
5. 5 X 4 C.M. contusion over left Gluteal region ಗಾಯ ಕಂಡು ಬಂದಿರುತ್ತದೆ.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಈಗ ಸಾಕ್ಷಿಗೆ ಗಾಯದ ಪ್ರಮಾಣಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿಪಿ-4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿರುವ ಗಾಯದ ಸ್ವರೂಪಗಳು ಕಬ್ಬಿಣ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲು** :- ಶ್ರೀ. **ಸಿ.ಕೆ.ಆರ್.** ವಕೀಲರಿಂದ **ಆರೋಪಿ** ಪರವಾಗಿ :-

ಯಾವುದೇ ವ್ಯಕ್ತಿಯು ಆಸ್ಪತ್ರೆಯಲ್ಲಿ ದಾಖಲಾದರೆ ನೀವು ಡೈರಿ ನಮೂದಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಡೈರಿಯಲ್ಲಿ ಎಷ್ಟು ಗಂಟೆಗೆ ಬಂದಿರುತ್ತಾರೆ ಹಾಗೂ ಯಾರ ಜೊತೆ ಬಂದಿರುತ್ತಾರೆ ಹಾಗೂ ಏನೆಲ್ಲಾ ಗಾಯಗಳು ಆಗಿರುತ್ತದೆಂದು ನಮೂದು ಮಾಡುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಡೈರಿಯನ್ನು ಪೋಲಿಸರಿಗಾಗಲೀ ಅಥವಾ ನ್ಯಾಯಾಲಯಕ್ಕೆಯಾಗಲೀ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಾಯದ ಪ್ರಮಾಣಪತ್ರದಲ್ಲಿ ಯಾರ ಜೊತೆ ಬಂದಿದ್ದರು ಎಂದು ಸಹ ನಮೂದು ಮಾಡುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-4 ರ ಗಾಯದ ಪ್ರಮಾಣಪತ್ರದಲ್ಲಿ ಸದರಿ ರಾಜಮ್ಮ ನವರು ಯಾರ ಜೊತೆ ಬಂದಿದ್ದರು ಎಂದು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗಾಯದ ಪ್ರಮಾಣಪತ್ರದಲ್ಲಿ ಕಬ್ಬಿಣದ ರಾಡು ಎಂದು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ರಾಜಮ್ಮನವರಿಗೆ ಚಿಕಿತ್ಸೆ ನೀಡುವಾಗ ಸದರಿ ಕಬ್ಬಿಣದ ರಾಡು ಮತ್ತು ದೊಣ್ಣೆಯನ್ನು ನಿಮ್ಮ ಮುಂದೆ ಹಾಜರು ಪಡಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ನಮೂದಿಸಿರುವ ಗಾಯಗಳಲ್ಲಿ ರಕ್ತದ ಗಾಯ ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ನಮೂದಿಸಿರುವ ಗಾಯದ ಸ್ವರೂಪಗಳಲ್ಲಿ ಮಂಡಿಗೆ ಏಟು ಆಗಿತ್ತು ಎಂದು ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಗಾಯಗಳು ಆದರೆ ಎಷ್ಟು ಸಮಯದವರೆಗೆ ಪ್ರೆಶ್ ಇರುತ್ತದೆಂದರೆ ಸಾಕ್ಷಿ 24 ತಾಸು ಒಳಗೆ ಇದ್ದರೆ ಪ್ರೆಶ್ ಗಾಯ ಹಾಗೂ 24 ತಾಸು ಆದ ನಂತರ ಓಲ್ಡ್ ಗಾಯ ಎಂದು ನುಡಿಯುತ್ತಾರೆ. 6.30 ರಿಂದ 11.40 ರವರೆಗೆ ಗಾಯದ ತಾಸು ಎಷ್ಟು ಆಗಿತ್ತು ಎಂದರೆ ಸಾಕ್ಷಿ 5-6 ತಾಸು ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಕಲರ್ ಆಫ್ ಇಂಜುರಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-4 ರ ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿರುವ ಗಾಯಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಹೊರಟಾದ ನೆಲದ ಮೇಲೆ ಬಿದ್ದರೆ ಆಗುವ ಸಾಧ್ಯತೆಗಳು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸದರಿ ದಿನದಂದು ರಾಜಮ್ಮ ರವರಿಗೆ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಹಾಗೂ ಅವರಿಗೆ ಅನುಕೂಲವಾಗಲೀ ಸುಳ್ಳು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.